




## ‘ಅಗ್ನಿ ಸ್ನಾನ’ವೆಂಬ ವಿಭಿನ್ನ ಪವಾಡ

ರಾಜಸ್ಥಾನದ ಉದಯಪುರದಿಂದ ಸುಮಾರು 60 ಕಿ.ಮೀ. ದೂರದ ಬಂಬೋರಾ ಗ್ರಾಮದಲ್ಲಿರುವ ‘ಇಡಾಣಾ ಮಾತಾ’ ದೇವಸ್ಥಾನದಲ್ಲಿ ತಿಂಗಳಿಗೆ 2 ಅಥವಾ 3 ಬಾರಿ ದೇವಿಯ ವಿಗ್ರಹದ ಸುತ್ತಮುತ್ತ ತನ್ನಿಂತಾನೇ ಬೆಂಕಿ ಹೊತ್ತಿ ಉರಿಯುವ ಪವಾಡ ನಡೆಯುತ್ತದೆ. ಭಕ್ತರು ದೇವಿಗೆ ಅರ್ಪಿಸುವ ‘ಚುನರಿ’ ಎಂದೆನ್ನುವ ರೇಷ್ಮೆ ಅಥವಾ ಹತ್ತಿಯ ವಸ್ತ್ರ, ‘ಲಚ್ಛಾ’ ಎಂಬ ಕೆಂಪು ಹಳದಿ ನೂಲಿನ ಹಾರ, ಹೂಮಾಲೆ ಇತ್ಯಾದಿ ಧಾರ್ಮಿಕ ವಸ್ತುಗಳ ಭಾರ ಹೆಚ್ಚಾದಾಗ, ದೇವಿ ಪ್ರತಿಮೆಯ ಸುತ್ತಲೂ ಸಹಜವಾಗಿ ಅಗ್ನಿ ಪ್ರಜ್ವಲಿತವಾಗುತ್ತದೆ.

ದೇವಾಲಯದ ಅರ್ಚಕರ ಪ್ರಕಾರ, ತನ್ನ ಮೇಲೆ ಅತಿಯಾದ ಹೊರೆ ಬಿದ್ದಾಗ, ಇಡಾಣಾ ತಾಯಿಯೇ ಜ್ವಾಲಾದೇವಿಯ ರೂಪವನ್ನು ಪಡೆಯುತ್ತಾಳಂತೆ. ಅಗ್ನಿಯಲ್ಲಿ ದೇವಿಯ ಶೃಂಗಾರ ವಸ್ತುಗಳು ಭಸ್ಮವಾಗುತ್ತವೆ. ಈ ನಡುವೆ ದೇವಿಯ ಪ್ರತಿಮೆಗೆ ಕೊಂಚವೂ ಹಾನಿಯಾಗುವುದಿಲ್ಲವಂತೆ. ಅಗ್ನಿಯ ಜ್ವಾಲೆಗಳು 10ರಿಂದ 20 ಅಡಿ ಎತ್ತರಕ್ಕೆ ಏಳುತ್ತವೆ. ಈ ಪವಾಡದ ಸಂಪೂರ್ಣ ಪ್ರಕ್ರಿಯೆಯನ್ನು ‘ದೇವಿಯ ಅಗ್ನಿಸ್ನಾನ’ ಎನ್ನಲಾಗುತ್ತದೆ.

ಈ ಬೆಂಕಿ ಹೇಗೆ ಹತ್ತಿಕೊಳ್ಳುತ್ತದೆ ಎಂಬ ರಹಸ್ಯವನ್ನು ಇದುವರೆಗೆ ಯಾರಿಗೂ ಭೇದಿಸಲು ಸಾಧ್ಯವಾಗಿಲ್ಲ. ಮಂದಿರದಲ್ಲಿ ಈ ಪವಾಡ ಕಂಡುಬಂದ ತಕ್ಷಣ, ಹತ್ತಿರದ ಹಳ್ಳಿಗಳಿಂದ ಹೆಚ್ಚಿನ ಸಂಖ್ಯೆಯ ಭಕ್ತರು ಸೇರುತ್ತಾರೆ. ದೇವಸ್ಥಾನವು ಮುಕ್ತ ಆಕಾಶದಡಿ ಒಂದು ಚೌಕದಲ್ಲಿ ನಿರ್ಮಿತವಾಗಿದ್ದು, ಯಾವುದೇ ಸ್ಥಿರ ಕಟ್ಟಡವನ್ನು ಹೊಂದಿಲ್ಲ. ಅಗ್ನಿ ಸ್ನಾನದ ಸಮಯದಲ್ಲಿ ಉಂಟಾಗುವ ಉಷ್ಣತೆ ಮತ್ತು ಜ್ವಾಲೆಗಳನ್ನು ನಿರ್ವಹಿಸಲು ಇದು ಪೂರಕವಾಗಿದೆ. ಅರಾವಳಿ ಪರ್ವತಶ್ರೇಣಿಗಳ ಮಧ್ಯದಲ್ಲಿ ನೆಲೆಗೊಂಡಿರುವ ಮಂದಿರದಲ್ಲಿ ಪೂಜಿಸುವ ಈ ದೇವಿಯನ್ನು ‘ಮೇವಾಡದ ರಾಣಿ’ ಎಂದು ಭಕ್ತರು ಕರೆಯುತ್ತಾರೆ. ಮೇವಾಡ ಪ್ರದೇಶದ ಪ್ರಮುಖ ಶಕ್ತಿಪೀಠಗಳಲ್ಲಿ ಇದು ಒಂದಾಗಿದೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ

## ಅವಂತಿಸ್ವಾಮಿ... ಪ್ರಾಚೀನ ದೇಗುಲ

ಅವಂತಿಸ್ವಾಮಿ ದೇವಾಲಯವು ಭಾರತದ ಕಾಶ್ಮೀರದ ಪ್ರಾಚೀನ ಶಿಥಿಲ ಹಿಂದೂ ದೇವಾಲಯವಾಗಿದೆ. ಕಾಶ್ಮೀರದಿಂದ 28 ಕಿ.ಮೀ. ದೂರದಲ್ಲಿರುವ ಝೀಲಂ ನದಿಯ ದಡದಲ್ಲಿರುವ ಅವಂತಿಪುರದಲ್ಲಿ ಅವಂತಿಸ್ವಾಮಿ ದೇವಾಲಯವಿದೆ. ಇದನ್ನು 9ನೇ ಶತಮಾನದ ಉತ್ಪಾಲ ರಾಜವಂಶದ ರಾಜ ಅವಂತಿ ವರ್ಮನ ಆಳ್ವಿಕೆಯಲ್ಲಿ ನಿರ್ಮಿಸಲಾಯಿತು. ಈ ದೇವಾಲಯವು ಶಿವ ಮತ್ತು ವಿಷ್ಣುವಿಗೆ ಅರ್ಪಿಸಲಾಗಿದೆ. ಈ ದೇವಾಲಯದ ವಾಸ್ತುಶಿಲ್ಪ ಉತ್ತರ ಭಾರತದ ಶಾಸ್ತ್ರೀಯ ನಾಗರಶೈಲಿಯ ವಾಸ್ತುಶಿಲ್ಪಕ್ಕೆ ಗಮನಾರ್ಹ ಹೋಲಿಕೆಯನ್ನು ಹೊಂದಿದೆ. ಮರಳುಗಲ್ಲಿನಿಂದ ನಿರ್ಮಿಸಲಾಗಿರುವ ಈ ದೇಗುಲವು ವಿಶಿಷ್ಟ ವಾಸ್ತುಶಿಲ್ಪ ಮತ್ತು ಪ್ರಾಚೀನ ಕಾಶ್ಮೀರದ ಕಲಾತ್ಮಕ ಮತ್ತು ವಾಸ್ತುಶಿಲ್ಪದ ಪರಾಕ್ರಮದ ಸಂಕೇತವಾಗಿ ನಿಂತಿದೆ.

ಶತಮಾನಗಳಿಂದ ಅವಂತಿಪುರ ಅವಶೇಷಗಳು ಸಮಯ, ಹವಾಮಾನ ಮತ್ತು ರಾಜಕೀಯ ಏರುಪೇರುಗಳಿಂದ ಹಾನಿಕಾರಕ ಪರಿಣಾಮಗಳನ್ನು ಅನುಭವಿಸಿದೆ. ಹೀಗಾಗಿ ದೇಗುಲವು ಭಾಗಶಃ ಶಿಥಿಲಗೊಂಡಿದೆ. ಅದಾಗ್ಯೂ ಅನೇಕ ವಿಶೇಷಗಳನ್ನು ಹೊಂದಿರುವ ಈ ದೇವಸ್ಥಾನದ ಕಟ್ಟಡವು ಕಲಾತ್ಮಕ ಕೆತ್ತನೆಗಳಿಂದ ಮನಸೆಳೆಯುತ್ತದೆ. ಅವಂತಿ ವರ್ಮನ ಕಾಲದಲ್ಲಿ ಈ ಪ್ರದೇಶವು ಸಮೃದ್ಧವಾಗಿದ್ದು, ಕಾಶ್ಮೀರವು ಶೈವ ಧರ್ಮ ಮತ್ತು ಹಿಂದೂ ತತ್ವಶಾಸ್ತ್ರ ಮತ್ತು ಸಂಸ್ಕೃತ ಸಾಹಿತ್ಯದ ಕಲಿಕಾ ಕೇಂದ್ರವಾಗಿತ್ತಂತೆ.

–ಎಸ್. ಪ್ರಭಾವತಿ, ಬೆಂಗಳೂರು



